**CW : 1**

PW : 1

# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1027/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಬಾಲಕೃಷ್ಣ ಕೆ ಎನ್ |
| ತಂದೆಯ ಹೆಸರು | : | ಮುತ್ತಪ್ಪ ಕೆ. |
| ಪ್ರಾಯ | : | 50 ವರ್ಷ |
| ಉದ್ಯೋಗ | | ಪೋ ಮುಖ್ಯ ಪೇದೆ , ಅರಣ್ಯ ಸಂಚಾರಿ ಧಳ, ಮಂಗಳೂರು |
| ವಾಸಸ್ಥಳ | : | ಬೆಳ್ಳಾರೆ |

ದಿನಾಂಕ:**05.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ನಾನು ಆಗಸ್ಟ್ 2022 ರಿಂದ ಪೆಭ್ರುವರಿ 2025 ರವರೆಗೆ ಈಶ್ವರಮಂಗಲ ಹೊರಠಾಣೆಯಲ್ಲಿ ಪೋ ಮುಖು ಪೇದೆ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿ.09-11-2024 ರಂದು ಪುತ್ತೂರು ಗ್ರಾಮಾಂತರ ಪೋ ಠಾಣಅ ಅಕ್ರ ನಂ. 128-2024 ರ ಪ್ರಕರಣ ಕಲಂ.299 ಬಿ ಎನ್ ಎಸ್ ಪ್ರಕರಣದಲ್ಲಿ ರೌಂಡ್ಸನಲ್ಲಿ ಇರುವಂತೆ ಪ್ರಭಾರ ಪೊಲೀಸ್ ನಿರೀಕ್ಷಕರು ಆದೇಶಿಸಿದದರು. ಆ ದಿನ ನಾನು ಮತ್ತು ಚಾಸಾ-2 ರವರು ಇಲಾಖಾ ಮೋಟಾರು ಸೈಕ್ನಲ್ಲಿ ರೌಂಡ್ಸನಲ್ಲಿ ಇದ್ದಾಗ ಈಶ್ವರಮಂಗಲ ಪೇಟೆಯಲ್ಲಿ ಇರುವಾಗ ಬೆ. 9.00 ಗಂಟೆ ಸಮಯದಲ್ಲಿ ಈಶ್ವರಮಂಗಲ ಕಡೆಯಿಂದ ಕೊಟ್ಯಾಡಿ ಕಡೆಗೆ ಒಂದು ಗೂಡ್ಸ್ ಪಿಕಪ್ ವಾಹನ ನಮ್ಮ ಮೋಟಾರು ಸೈಕಲ್ಲನ್ನು ಓವರ್ಟೇಕ್ ಮಾಡಿಕೊಂಡು ಮುಂದೆ ಹೋಯಿತು. ಪಿಕಪ್ ನ ಹಿಂಬದಿ ಟಾರ್ಪಲ್ ಹಾಕಿತ್ತು. ಅದರ ಒಳಗಡೆ ದನಗಳು ಕೂಗುವ ಶಬ್ದ ಕೇಳಿಸಿತು. ನಾವು ಕೂಡಲೇ ಮೋಟಾರು ಸೈಕಲ್ನ ಹಾರ್ನ್ ಹಾಕಿ ಪಿಕಪ್ ವಾಹನವನ್ನು ನಿಲ್ಲಿಸುವಂತೆ ಸೂಚನೆ ನೀಡಿದೆವು. ಆದರೆ ಪಿಕಪ್ ವಾಹನದ ಚಾಲಕ ವಾಹನ ನಿಲ್ಲಿಸದೆ ಮುಂದೆ ಹೋಗಿದ್ದು ನಾವು ಆ ವಾಹನವನ್ನು ಹಿಂಬಾಲಿಸಿರುತ್ತೇವೆ. ನಂತರ ಬೆಳ್ಳಿಚಡವು ಎಂಬಲ್ಲಿ ಸುಮಾರು 9.05 ರ ಸಮಯದಲ್ಲಿ ಪಿಕಪ್ ವಾಹನದ ಚಾಲಕ ವಾಹನವನ್ನು ರಸ್ತೆ ಬದಿಗೆ ದನಿಲ್ಲಿಸಿ ವಾಹನದಿಂದ ಚಾಲಕ ಮತ್ತು ಇನ್ನೊಬ್ಬರು ಇಳಿದು ತಮ್ಮ ಬಲಬದಿಗೆ ಓಡಿಹೋದರು. ಆಗ ನಾವು ಅವರನ್ನು ಹಿಡಿಯಲು ಪ್ರಯತ್ನಿಸಿದೆವು. ಆದರೆ ಅವರು ಸಿಗಲಿಲ್ಲ. ಓಡಿಹೋದ ವ್ಯಕ್ತಿಗಳನ್ನು ನಾವು ನೋಡಿದೆವು.

ನಂತರ ಹಿಂರುಗಿಸಿ ಪಿಕಪ್ ವಾಹನವನ್ನು ಪರಿಶೀಲಿಸಿದಾಗ ಪಿಕಪ್ ವಾಹನದ ಹಿಂದೆ ದನಗಳ ಕೈಕಾಲುಗಳನ್ನು ಕಟ್ಟಿಹಾಕಿ ಹಿಂಸಾತ್ಮಕ ರೀತಿಯಲ್ಲಿ ಕುಳ್ಳಿರಿಸಲಾಗಿತ್ತು. ದನಗಳು ಜೀವನ್ಮರಣ ಸ್ಥಿತಿಯಲ್ಲಿ ಇರುವುದನ್ನು ಕಂಡು ವಾಹನದಿಂದ ಸಾರ್ವಜನಿಕರ ಸಹಾಯದಿಂದ ದನಗಳನ್ನು ಕೆಳಗೆ ಇಳಿಸಿ ಅಲ್ಲೇ ಕಟ್ಟಿ ಹಾಕಿದೆವು. ಆ ಸಮಯದಲ್ಲಿ ಫೊಟೋಗಳನ್ನು ತೆಗೆಸಿದ್ದೇವೆ. ಸ್ಥಳದಲ್ಲಿ ಇದ್ದ ದನಗಳಲ್ಲಿ ಒಂದು ಕಂದು ಹಾಗೂ ಬಿಳಿಬಣ್ಣದ ಹೋರಿ, 2 ಕಪ್ಪು ಮತ್ತು ಬಿಳಿಬಣ್ಣದ ಹಸುಗಳು, ಕಂದು ಮತ್ತು ಕಪ್ಪು ಮಿಶ್ರಿತ ಹಸು, ಕಂದು ಮತ್ತು ಕಪ್ಪು ಮಿಶ್ರಿತ ಹೋರಿ ಕರು, ಕಂದುಬಣ್ಣದ ಹೋರಿ ಗಳು ಇದ್ದವು. ಅವುಗಳ ಪೈಕಿ ಕಂದು ಮತ್ತು ಬಿಳಿಬಣ್ಣದ ಹೋರಿಕರು ಮೃತಪಟ್ಟಿತ್ತು. ನಂತರ ಚಾಸಾ-2 ರವರನ್ನು ಸ್ಥಳದಲ್ಲಿಯೇ ಇರಿಸಿ ನಾನು ಈಶ್ವರಮಂಗಲ ಹೊರಠಾಣೆಗೆ ಬಂದಿರುತ್ತೇನೆ. ನಂತರ ವರದಿಯನ್ನು ತಯಾರಿಸಿ ಪಿಸಿ-455 ಯುವರಾಜ್ ರವರ ಮುಖಾಂತರ ಬೆ.10.30 ಗಂಟೆಗೆ ಪುತ್ತೂರು ಗ್ರಾಮಾಂತರ ಪೋ ಠಾಣೆಗೆ ವರದಿಯನ್ನು ಕಳುಹಿಸಿರುತ್ತೇನೆ. ಆರೋಪಿಗಳು ದನಗಳನ್ನು ಎಲ್ಲಿಂದಲೋ ಕಳವು ಮಾಡಿಕೊಂಡು ಕೆಎ-19-ಎ-8298 ಪಿಕಪ್ ವಾಹನದಲ್ಲಿ ಕೇರಳ ಕಡೆಗೆ ಮಾಂಸ ಮಾಡಿ ವಧೆ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿದ್ದುದು ಕಂಡುಬಂದಿರುತ್ತದೆ.

ನಾನು ನೀಡಿದ್ದ ವರದಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ವರದಿಯನ್ನು ಹಾಗೂ ಸಹಿಯನ್ನು ನೋಡಿ ಗುರುತಿಸಿದ್ದು ವರದಿಯನ್ನು ನಿಪಿ-1 ಎಂದು ಸಹಿಯನ್ನು 1 ಎ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-16 ರವರು ತಕ್ಷೀರು ಸ್ಥಳಕ್ಕೆ ಬಂದು ಮಹಜರು ಕ್ರಮ ಜರುಗಿಸಿರುತ್ತಾರೆ. ನಾನು ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಪಿಕಪ್ ವಾಹನ ಹಾಗೂ ದನಗಳನ್ನು ಕಟ್ಟಿಹಾಕಿದ ಸ್ಥಳವನ್ನು ಸಹ ತೋರಿಸಿರುತ್ತೇನೆ. ಸ್ಥಳದಲ್ಲಿ ಚಾಸಾ-16 ರವರು ಪಿಕಪ್ ವಾಹ, ಪಿಕಪ್ ವಾಹನದ ಒಳಗೆ ಇದ್ದ ಓಪ್ಪೋ ಕಂಪನಿಯ ಮೊಬೈಲ್ ಫೋನ್, ಆರ್ ಸಿ, ಎಮಿಷನ್ ಟೆಸ್ಟ್ ಸರ್ಟಿಫಿಕೇಟ್, ಡಿ ಎಲ್, ಇನ್ಸುರೆನ್ಸ ನ ಡೂಪ್ಲಿಕೇಟ್ ಪ್ರತಿಗಳನ್ನು, ಒಂದು ಸತ್ತ ಹೋರಿ ಕರು ಮತ್ತು ಜೀವಂತ ಇದ್ದ 4 ಜಾನುವಾರುಗಳನ್ನು, 9 ಹಗ್ಗಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಆ ಸಮಯದಲ್ಲಿ ಮಹಜರಿಗೆ ಸಾಕ್ಷಿಯಾಗಿ ಸುರೇಶ್ ರೈ ಮತ್ತು ಪ್ರಕಾಶ್ ಎನ್ನುವವರು ಇದ್ದರು. ಮಹಜರನ್ನು ಅದೇ ದಿನ ಮ.12.56 ರಿಂದ 13.56 ರ ವರೆಗೆ ಜರುಗಿಸಿರುತ್ತಾರೆ. ಮಹಜರು ಕಾಲದಲ್ಲಿ ಚಾಸಾ-13 ರವರು ವೀಡಿಯೋಗ್ರಫಿ ಮಾಡಿರುತ್ತಾರೆ.

ದಿ.27-11-24 ರಂದು ಆರೋಪಿತರಾದಿದ ರಫೀಕ್ ಮತ್ತು ಸಲೀಮ್ ರವರು ಪೋ ಠಾಣೆಗೆ ಬಂದಿದ್ದು ಅವರನ್ನು ನಾನು ನೋಡಿ ಗುರುತಿಸಿರುತ್ತೇನೆ. ಅವರು ಪಿಕಪ್ ವಾಹನದ ಚಾಲಕ ಮತ್ತು

ವಾಹನದಲ್ಲಿ ಇದ್ದ ಇನ್ನೊಬ್ಬ ವ್ಯಕ್ತಿಯಾಗಿರುತ್ತಾರೆ. ಅವರು ಪೋ ಠಾಣೆಗೆ ಬಂದಾಗ ಅವರ ಹೆಸರು ನನಗೆ ಗೊತ್ತಾಗಿರುತ್ತದೆ.

ದಿ.3.4.25 ರಂದು ಅಬ್ದುಲ್ ರಜಾಕ್ ಯಾನೆ ಜಬ್ಬಾರ್ ರವರು ಪೋ ಠಾಣೆಗೆ ಬಂದಿದ್ದು ಆಗ ಅವರನ್ನು ನಾನು ನೋಡಿರುತ್ತೇನೆ. ಅವರು ಜಾನುವಾರುಗಳನ್ನು ಸ್ಥಳೀಯರಿಂದ ಪಡೆದು ಅವುಗಳನ್ನು ವಧೆ ಮಾಡಲು ಕೇರಳಕ್ಕೆ ರಫೀಕ್ ಮತ್ತು ಸಲೀಮ್ ರವರ ಮುಖಾಂತರ ಕಳುಹಿಸುತ್ತಿದ್ದರು.

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಈ ದಿನ ನ್ಯಾಯಾಲಯಕ್ಕೆ ಗೈರುಹಾಜರಾಗಿದ್ದು ಅವರ ಗುರುಸಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

ದೂರು ಕೊಟ್ಟ ನಂತರ ನನ್ನನ್ನು 2 ಬಾರಿ ವಿಚಾರಣೆ ಮಾಡಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮಾನ್ಯ ಸ ಸ ಅ ರವರು ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 1**

PW : 1